**( ಮಧ್ಯಂತರ ಅರ್ಜಿ ಅದೇಶ ನಂ.8 ರಿಂದ 10 ರನ್ವಯ ಇಂದು ದಿನಾಂಕ 09-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಂದುವರೆದ ಮುಖ್ಯವಿಚಾರಣೆಃ ಅರ್ಜಿದಾರರ ಪರ ಶ್ರೀ ಸಿವಿಎ ವಕೀಲರಿಂದ**

ನಾನು ಈ ಅರ್ಜಿಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯ ಗುರುತಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು .

| ಕ್ರ. ಸಂ. | ದಾಖಲೆಗಳ ನಮೂನೆ | ನಿಶಾನೆ |
|---|---|---|
| 1 | 2020-21 ಲೆಕ್ಕ ವರ್ಷದ ಆದಾಯ ತೆರಿಗೆ ಪಾವತಿಸಿದ ರಿರ್ಟನ್ಸನ ದೃಡಿಕೃತ ಪ್ರತಿ | ನಿ.ಪಿ-12 |

ಪಾಟೀಸವಾಲುಃ 1,3 ರಿಂದ 6 ನೇ ಎದುರುದಾರರು ಏಕ ತರ್ಫಿಯಾಗಿರುತ್ತಾರೆ.

**ಪಾಟೀಸವಾಲುಃ 2 ನೇ ಎದುರುದಾರರ ಪರ ಶ್ರೀ ಎನ್ ಎಂ ಬಿ ವಕೀಲರಿಂದ**

1. ನಿಪಿ.12 ರಲ್ಲಿ ಬಾಡಿಗೆ ಆದಾಯವನ್ನು ಸಹ ಕಾಣಿಸಲಾಗಿದೆ ಎಂದರೆ ಸರಿ. ನಿಪಿ.12 ರ ಜೊತೆ ಬ್ಯಾಲನ್ಸ ಶೀಟ ಹಾಗೂ ಆಯಾ ಬಾಬ್ತು ಆದಾಯ ತೋರಿಸುವ ಪಟ್ಟಿ ಹಾಜರುಪಡಿಸಿಲ್ಲ ಎಂದರೆ ಸರಿ. ಬ್ಯಾಲನ್ಸ ಶೀಟನಲ್ಲಿ ಆದಾಯ ಮತ್ತು ವ್ಯಯ ತೋರಿಸಿರುತ್ತಾರೆ ಎಂದರೆ ಸರಿ. ನಿಪಿ.6 ರಿಂದ 10 ರ ಜೊತೆ ಬ್ಯಾಲನ್ಸ ಶೀಟ ಹಾಗೂ ಆಯಾ ಬಾಬ್ತು ಆದಾಯ ತೋರಿಸುವ ಪಟ್ಟಿ ಹಾಜರುಪಡಿಸಿಲ್ಲ ಎಂದರೆ ಸರಿ. ಬ್ಯಾಲನ್ಸ ಶೀಟನಲ್ಲಿ ಆದಾಯ ಮತ್ತು ವ್ಯಯ ತೋರಿಸಿರುತ್ತಾರೆ ಎಂದರೆ ಸರಿ. ಬ್ಯಾಲನಸ ಶೀಟ ಹಾಜರುಪಡಿಸಿದ್ದಲ್ಲಿ ಸದರಿ ಪಾಲುದಾರಿಕೆ ಸಂಸ್ಥೆಯ ಪಾಲುದಾರರ ಪ್ರತ್ಯಕ ಹಿಸ್ಸೆ ಕಂಡು ಬರುತ್ತದೆ ಎಂದರೆ ಸರಿ. ನಿಪಿ.6

ರಿಂದ 10 ಮತ್ತು 12 ರಲ್ಲಿ ಉಳಿತಾಯ ಮಾಡಿರುವ ಠೇವಣಿಗಳ ಕುರಿತು ನಮೂದಾಗಿದೆ ಎಂದರೆ ಸರಿ. ಸದರಿ ಠೇವಣಿ ಆದಾಯ ಅದು ನಿರಂತರವಾಗಿದ್ದು ಒಬ್ಬ ವ್ಯಕ್ತಿಯ ಪ್ರತ್ಯಕ ಆದಾಯವಾಗುವುದಿಲ್ಲ ಎಂದರೆ ಸರಿ. ನಿಪಿ.12 ರಲ್ಲಿ ಕಂಡು ಬರುವ ಬಾಡಿಗೆ ಆದಾಯ ಯಾವ ಆಸ್ತಿಯ ಬಾಡಿಗೆ ಕುರಿತು ಎಂದು ಸ್ಪಷ್ಟವಾಗಿ ಕಂಡು ಬರುವುದಿಲ್ಲ ಎಂದರೆ ಸರಿ.

2. ನನ್ನ ಗಂಡನ ಮರಣದ ಬಳಿಕ ಸದರಿ ಪಾಲುದಾರಿಕೆ ಸಂಸ್ಥೆ ಈಗಲೂ ನಡೆದುಕೊಂಡು ಹೊಗುತ್ತಿದ್ದೆ ಎಂದರೆ ಸರಿ. ನನ್ನ ಗಂಡ ಮರಣ ಹೊಂದುವ ಕಾಲಕ್ಕೆ ನಿಪಿ.6 ರಿಂದ 10 ಮತ್ತು 12 ರಲ್ಲಿ ಕಂಡು ಬರುವ ಪಾಲುದಾರಿಕೆ ಸಂಸ್ಥೆಗೆ ನಾನು ಸಹ ಒಬ್ಬ ಪಾಲುದಾರಳು ಆಗಿದ್ದೆ ಎಂದರೆ ಸರಿ. ನಿಪಿ.6 ರಿಂದ 10 ಮತ್ತು 12 ರಲ್ಲಿ ಪಾಲುದಾರಿಕೆ ಸಂಸ್ಥೆಯಿಂದ ನನಗೆ ಬರುವ ಪ್ರತ್ಯಕ ಆದಾಯದ ಕುರಿತು ಕಂಡು ಬರುವುದಿಲ್ಲ ಎಂದರೆ ಸರಿ.

3. ನಿಪಿ.12 ರಲ್ಲಿ ಕಾಣಿಸಿರುವಂತೆ ಬಾಡಿಗೆ ಆದಾಯವು ನಿಪಿ.6 ರಿಂದ 10 ರಲ್ಲಿ ಕಂಡು ಬರುವುದಿಲ್ಲ ಎಂದರೆ ಸರಿ. ಎಲ್ಲಾ ಮೂಲಗಳಿಂದ ನಿಮ್ಮ ಗಂಡನಿಗೆ ಮರಣ ಹೊಂದುವ ಸಮಯದಲ್ಲಿ ಎಷ್ಟು ಆದಾಯ ಇತ್ತು ಎಂದು ತೋರಿಸಿರುವ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಹಾಜರು ಮಾಡಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.